ಧನಂಜಯ
**ಪಿಡಬ್ಲ್ಯೂ-1**

**ದಿನಾಂಕ 15.10.2024 ರಂದು** ಸಾಕ್ಷಿಗೆ **ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರಿದ ಪಾಟಿ ಸವಾಲು ಪ್ರತಿವಾದಿಯರ ಪರ ಸಿ ಎಸ್ ಎಸ್ **ವಕೀಲರವರಿಂದಃ**

ದಾವಾ ಸ್ವತ್ತು ಗ್ರಾಮ ಠಾಣೆಗೆ ಸೇರಿದ ಸ್ವತ್ತು ಎಂದು ತೋರಿಸಲು ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಗ್ರಾಮ ಪಂಚಾಯತಿಯವರು ರಚಿಸಿರುವ ನಿವೇಶನಗಳ ಸ್ಕೇಚ್ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿರುತ್ತೇನೆ ಎಂದು ನುಡಿದರು. ಚನ್ನೇಗೌಡರಿಗೆ ಮಂಜೂರು ಮಾಡುವ ಪೂರ್ವದಲ್ಲಿ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ತಾಲೂಕು ಪಂಚಾಯತಿ ಅನುಮತಿ ಪಡೆದಿರುವ ದಾಖಲೆಗಳು ಇವೆಯಾ ಎಂದರೆ ಸಾಕ್ಷಿಯು ನನ್ನ ಮಾರಾಟಗಾರರಿಗೆ ಮಂಜೂರು ಮಾಡುವಾಗ ಪೂರ್ವಾನುಮತಿ ಪಡೆಯಬೇಕಾಗಿರುವುದಿಲ್ಲ, ಪಂಚಾಯತಿಯವರೇ ನೇರವಾಗಿ ಮಂಜೂರು ಮಾಡುವ ಅಧಿಕಾರ ಇತ್ತು.

2. ಗ್ರಾಮ ಪಂಚಾಯತಿ ಕಾಯಿದೆಯನ್ವಯ ತಾಲೂಕು ಪಂಚಾಯತಿಯಿಂದ ಪೂರ್ವಾನುಮತಿ ಪಡೆಯದೇ ಗ್ರಾಮ ಪಂಚಾಯತಿ ಮಂಜೂರು ಮಾಡುವ ಹಾಗಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ನಿವೇಶನ ಆಗಿರುವ ಸರ್ವೆ ನಂಬರ ಸ್ವತ್ತು 1 ಎಕರೆ 20 ಗುಂಟೆ ಇರುತ್ತದೆ.

ಸದರಿ ಜಮೀನಿನಲ್ಲಿ 24 ನಿವೇಶನಗಳನ್ನು ಮಾಡಲಾಗಿರುತ್ತದೆ, ಆ ನಿವೇಶನಗಳನ್ನು ಯಾರು ಯಾರಿಗೆ ಮಂಜೂರು ಮಾಡಲಾಗಿರುತ್ತದೆ ಎಂದು ಹೇಳಲು ನನಗೆ ಈಗ ಆಗುವುದಿಲ್ಲ.

3. ದಾವಾ ನಿವೇಶನದ ಸರ್ವೆ ನಂಬರ 241 ವಿಸ್ತೀರ್ಣ 1 ಎಕರೆ 25 ಗುಂಟೆ ಸ್ವತ್ತನ್ನು ದಿನಾಂಕ 04.02.1982 ರಲ್ಲಿ ಪಾಂಡವಪುರ ತಹಸೀಲ್ದಾರವರು ದರ್ಕಾಸ್ತು ಮೂಲಕ 1 ನೇ ಪ್ರತಿವಾದಿ ಮಾವನಾದ ರಾಮಯ್ಯ ಬಿನ್ ರಂಗಯ್ಯನವರಿಗೆ ಮಂಜೂರಾಗಿರುತ್ತದೆ ಎಂದರೆ ಸಾಕ್ಷಿಯು ಸದರಿ ಸ್ವತ್ತು ಗ್ರಾಮ ಠಾಣಾ ಸ್ವತ್ತು ಎಂದು ಅವರಿಗೆ ಬದಲಿ ಸ್ವತ್ತನ್ನು ತಹಸೀಲ್ದಾರವರು ನೀಡಿರುತ್ತಾರೆ. ಯಾವ ಸ್ವತ್ತನ್ನು 1 ನೇ ಪ್ರತಿವಾದಿಯ ಮಾವನವರಿಗೆ ನೀಡಿರುತ್ತಾರೆ ಎಂಬುದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. 1 ನೇ ಪ್ರತಿವಾದಿಯ ಮಾವ, ಗಂಡ ಮತ್ತು ಮಗನ ಸಮಾಧಿಗಳು ಸದರಿ ಸರ್ವೆ ನಂಬರನಲ್ಲಿ ಇವೆ ಎಂದರೆ ಸಾಕ್ಷಿಯು 1 ನೇ ಪ್ರತಿವಾದಿಯ ಮಗನ ಸಮಾಧಿ ಮಾತ್ರ ಸದರಿ ಸರ್ವೆ ನಂಬರನಲ್ಲಿ ಇರುತ್ತದೆ ಎಂದು ನುಡಿದರು.

4. ಸರ್ವೆ ನಂಬರ 241 ರಲ್ಲಿ ರಸ್ತೆ ಮಾಡಲು ಪ್ರಯತ್ನಿಸಿದಾಗ ಪ್ರತಿವಾದಿಯರು ಕಟ್ಟೇರಿ ಗ್ರಾಮ ಪಂಚಾಯತಿಯ ವಿರುದ್ದ ಅ ದಾ ಸಂ 328/2021 ರಂತೆ ದಾವೆ ಸಲ್ಲಿಸಲಾಗಿದೆ ಎಂದರೆ ಸರಿ. ಸರ್ವೆ ನಂಬರ 241 ಇಂಡೀಕರಣವಾಗಿ ಹೊಸ ಸ ನಂ 285 ಆಗಿರುತ್ತದೆ ಎಂದರೆ ಸರಿ. ಸ ನಂ 285 ಸ್ವತ್ತು ಈಗಲೂ ಸಹಾ 1 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಅವರ ಭಾವನ ಹೆಸರಿನಲ್ಲಿರುತ್ತದೆ ಎಂದು ನುಡಿದರು. ನನ್ನ ಮಾರಾಟಗಾರರಾದ ಚನ್ನೇಗೌಡರು ದಾವಾ ಸ್ವತ್ತಿನಲ್ಲಿ ಎಂದಿಗೂ ಸ್ವಾಧೀನಾನುಭವದಲ್ಲಿರಲಿಲ್ಲ ಎಂದರೆ ಸರಿಯಲ್ಲ. ನಾವು ದಾವಾ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರೇ ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ.

5. 1 ನೇ ಪ್ರತಿವಾದಿ ಕಟ್ಟೇರಿ ಗ್ರಾಮದವರು ಎಂದರೆ ಸರಿ. 2 ರಿಂದ 5 ನೇ ಪ್ರತಿವಾದಿಯರು ಬೇರೆ ಬೇರೆ ಕಡೆ ವಾಸವಾಗಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯು ಮೂಲತಃ ತಮಿಳುನಾಡು ರಾಜ್ಯದವರಾಗಿದ್ದು, ಪರಿಶಿಷ್ಟ ಪಂಗಡದವರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯವರಿಗೆ ಸ್ಥಳೀಯರ ಸಹಕಾರವಿಲ್ಲದೇ ಅವರಿಗೆ ಸೇರಿರುವ ಸ್ವತ್ತನ್ನು

ಕಟ್ಟೇರಿ ಗ್ರಾಮ ಪಂಚಾಯತಿಯ ಹೆಸರಿಗೆ ದಾಖಲೆಗಳನ್ನು ಸೃಷ್ಟಿ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

ಮುಂದವರಿದ ವಾದಿ ಪರ ವಿಚಾರಣೆ ಇಲ್ಲ ಎಂದು ನುಡಿದಿರುತ್ತಾರೆ.

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.**

**ಸಾ.ಓ.ಹೇ.ಸ.ಇದೆ.**

2 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ
ಪಾಂಡವಪುರ